**ದಿನಾಂಕಃ 07-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಡಿ.ಡಿ.ಕೆ., ಆರೋಪಿ ಪರ ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ., ವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನಗೆ 05 ಎಕರೆ ನೀರಾವರಿ ಜಮೀನು ಇರುತ್ತದೆ. ನಾನು ಅಕ್ಕಿ ಮತ್ತು ಹೂವಿನ ವ್ಯಾಪಾರ ಮಾಡುತ್ತೇನೆ. ವ್ಯವಸಾಯದಿಂದ ಹಾಗೂ ಹೂವಿನ ವ್ಯಾಪಾರದಿಂದ ಎಷ್ಟು ಆದಾಯ ಬರುತ್ತದೆ ಎಂಬುದರ ಬಗ್ಗೆ ಲೆಕ್ಕ ಪತ್ರ ಇಟ್ಟಿರುತ್ತೀರಾ ಅಂದರೆ ಇಟ್ಟಿರುತ್ತೇನೆ. ಅಕ್ಕಿಯನ್ನು ರೈತರಿಂದ ತೆಗೆದುಕೊಂಡು ಮಾರಾಟ ಮಾಡುವುದು ಅದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆ ಇರುವುದಿಲ್ಲ. ಜಮೀನು ಇರುವ ಬಗ್ಗೆ ದಾಖಲೆ ಹಾಜರಪಡಿಸಿರುತ್ತೀರಾ ಅಂದರೆ ಎಲ್ಲರ ಹೆಸರಿನಲ್ಲಿ ಜಂಟಿ ಇರುತ್ತದೆ. ಯಾವ್ಯಾವ ರೈತರಿಂದ ಅಡಿಕೆ ತೆಗೆದುಕೊಳ್ಳುವ ಬಗ್ಗೆ, ಅದರ ತೂಕದ ಬಗ್ಗೆ ಹಾಗೂ ಅದಕ್ಕೆ ಹಣ ನೀಡಿದ ಬಗ್ಗೆ ದಾಖಲೆಯನ್ನು ಇಟ್ಟಿರುತ್ತೀರಾ ಅಂದರೆ ಇಲ್ಲಾ. ದಿನಾಂಕಃ 28-04-2019 ರಂದು ಆರೋಪಿ ನನ್ನ ಬಳಿ ಬಂದು ಹಣ ಕೇಳಿದರು. ಆರೋಪಿ ಹಣ ಕೇಳಲು ಒಬ್ಬರೇ ಬಂದಿರುತ್ತಾರೆ. ನಾನು ದಿನಾಂಕಃ 28-04-2019 ರಂದು ಆರೋಪಿಗೆ ಹಣ ನೀಡಿದ್ದು, ಅದಕ್ಕಿಂತ ಒಂದು ವಾರದ ಪೂರ್ವದಲ್ಲಿ ಹಣ ಕೇಳಿರುತ್ತಾರೆ. ಹಣ ಕೊಟ್ಟ ಬಗ್ಗೆ ಯಾವುದೇ ಕಾಗದ ಪತ್ರವನ್ನು ಬರೆಸಿಕೊಂಡಿರುವುದಿಲ್ಲ, ಆರೋಪಿ ಪರಿಚಯಸ್ಥನಿದ್ದ. ಆರೋಪಿಗೆ ನಾನು ಹಣವನ್ನು ಬಡ್ಡಿಗಾಗಿ ನೀಡಿರುವುದಿಲ್ಲ, ಪರಿಚಯವಿರುವುದರಿಂದ ಹಣ ನೀಡಿರುತ್ತೇನೆ. ಆರೋಪಿಗೆ ಹಣ ನೀಡಿದ ಬಗ್ಗೆ ಪುಸ್ತಕದಲ್ಲಿ ಬರೆದುಕೊಂಡಿದ್ದು ಅದನ್ನು ಹಾಜರಪಡಿಸಿರುವುದಿಲ್ಲ. ಬೇರೆ ಯಾರಿಗೂ ಹಣ ನೀಡಿರುವುದಿಲ್ಲ. 2-3 ತಿಂಗಳ ಕಾಲವಾದರು ಆರೋಪಿ ಹಣ ನೀಡಿರುವುದಿಲ್ಲ. ನಾನು ಆರೋಪಿಗೆ ರೂ. 1.00 ಲಕ್ಷ ಹಣವನ್ನು ವೇರಿಟಾಸ್ ಫೈನಾನ್ಸ, ಹಾವೇರಿಯಿಂದ ತಂದು ಕೊಟ್ಟಿರುತ್ತೇನೆ. ವೇರಿಟಾಸ್‌ನಿಂದ ಹಣ ಪಡೆದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರಪಡಿಸಿರುತ್ತೀರಾ ಅಂದರೆ ಹಾಜರಪಡಿಸಿರುವುದಿಲ್ಲ. ದಿನಾಂಕಃ 17-10-2019 ರಂದು ಆರೋಪಿ ನನಗೆ

ಚೆಕ್ ಕೊಟ್ಟಿರುತ್ತಾರೆ. ಆ ಚೆಕ್‌ನ್ನು ಫೆಡರಲ್ ಬ್ಯಾಂಕ್, ಹಾವೇರಿಗೆ ಅದೇ ದಿನ ಚೆಕ್ ನಗಧೀಕರಣಕ್ಕೆ ಹಾಕಿರುತ್ತೇನೆ. ದಿನಾಂಕಃ 19-10-2019 ರಂದು ಹಣ ಇರುವುದಿಲ್ಲ ಅಂತಾ ಹೇಳಿ ಚೆಕ್ ವಾಪಸ್ಸ ಬಂದಿರುತ್ತದೆ. ಚೆಕ್ ನಗಧೀಕರಣವಾಗದೇ ವಾಪಸ್ಸ ಬಂದ ಮೇಲೆ ಆರೋಪಿಯನ್ನು ಬೇಟಿ ಮಾಡಿ ಹಣ ಕೊಡು ಅಂತಾ ಕೇಳಿರುವುದಿಲ್ಲ. ಸಾಕ್ಷಿ ಮುಂದುವರೆದು ಆರೋಪಿಗೆ ದೂರವಾಣಿ ಮುಖಾಂತರ ವಿಚಾರ ತಿಳಿಸಿದ್ದು, ಕೊಡುತ್ತೇನೆ ಅಂತಾ ಹೇಳಿ ಹಣ ಕೊಟ್ಟಿರುವುದಿಲ್ಲ. ಆರೋಪಿಗೆ ಹಣ ಕೇಳಿದರು ಕೊಡದೆ ಇದ್ದಾಗ ದಿನಾಂಕಃ 16-11-2019 ರಂದು ವಕೀಲರ ಮೂಲಕ ನೋಟಿಸ್ ಕಳುಹಿಸಿರುತ್ತೇನೆ. ನಾನು ಕಳುಹಿಸಿದ ನೋಟಿಸ್ ಆರೋಪಿಗೆ ಜಾರಿಯಾಗಿರುತ್ತದೆ.

**2.** ನೋಟಿಸ್ ಜಾರಿಯಾದ ನಂತರ ಆರೋಪಿ ನನಗೆ ಯಾವುದೇ ಪ್ರತ್ಯುತ್ತರ ನೀಡಿರುವುದಿಲ್ಲ . ನಂತರ ಆರೋಪಿಯ ವಿರುದ್ಧ ವಕೀಲರ ಮೂಲಕ ಈ ಪ್ರಕರಣ ದಾಖಲು ಮಾಡಿರುತ್ತೇನೆ. ನಾನು ಆದಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ. ಅದೇ ರೀತಿ ಸೇಲ್ಸ ಟ್ಯಾಕ್ಸ ಕೂಡಾ ಮಾಡಿರುವುದಿಲ್ಲ. ಆರೋಪಿಗೆ ನಾನು ರೂ. 1.00 ಲಕ್ಷ ಹಣವನ್ನು ಕೊಟ್ಟಿರುತ್ತೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನೋಟಿಸ್ ನೀಡಿದ ನಂತರ ನನ್ನ ಮತ್ತು ಆರೋಪಿಯ ಮಧ್ಯ ಇದ್ದ ವ್ಯಾಪಾರ ಮುಕ್ತಾಯವಾಗಿರುತ್ತದೆ. ನೀವು ಆರೋಪಿಯ ಜಮೀನಿನಲ್ಲಿದ್ದ ಅಡಿಕೆ ತೆಗೆದುಕೊಂಡು ಹೋಗಿದ್ದು, ಆರೋಪಿ ನಿಮಗೆ ಕೊಡಬೇಕಾದ ಹಣ ಮುಕ್ತಾಯವಾಗಿದ್ದು, ನಿಮಗೆ ಆರೋಪಿ ಯಾವುದೇ ಹಣ ಕೊಡುವುದು ಬಾಕಿ ಇರುವುದಿಲ್ಲ ಅಂದರೆ ಸರಿಯಲ್ಲ. ನಾನು ಆರೋಪಿ ಕಡೆಯಿಂದ 02 ಚೆಕ್ ಪಡೆದಿರುತ್ತೇನೆ, ಅವು 000001, 000007 ಅಂತಾ ಇರುತ್ತವೆ. ಈ ಪ್ರಕರಣದಲ್ಲಿ ಒಂದು ಚೆಕ್ ಇದ್ದು, ಇನ್ನೊಂದು ಚೆಕ್‌ಮೇಲೆ ಬೇರೆ ಪ್ರಕರಣ ದಾಖಲು ಮಾಡಿರುತ್ತೇನೆ. ನೀವು ನೀಡಿದ ಹಣಕ್ಕೆ ಆರೋಪಿ ಕಡೆಯಿಂದ ತೆಗೆದುಕೊಂಡು ಹೋದ ಅಡಿಕೆಯ ಹಣಕ್ಕೆ ಮುಕ್ತಾಯವಾಗಿದ್ದರು ಕೂಡಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ. ಆರೋಪಿ ಕಡೆಯಿಂದ ಹಣ

ಪಡೆದುಕೊಂಡು ಹೋದರು ಸಹ ಆರೋಪಿ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿಯು ಚೆಕ್ ಕೊಡುವಂತೆ ಕೇಳಿದ್ದರು ಕೂಡಾ ನೀವು ಕೊಡದೇ, ಆರೋಪಿಯ ಚೆಕ್‌ನ್ನು ದುರುಪಯೋಗಪಡಿಸಿಕೊಂಡಿರುತ್ತೀರಿ ಅಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ಅಪರಾಧವಾಗಿಲ್ಲ ಅಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ತಪ್ಪು ನಡೆಯದೇ ಇದ್ದರೂ ಕೂಡಾ ಖೊಟ್ಟಿ ಪ್ರಕರಣವನ್ನು ಸೃಷ್ಠಿ ಮಾಡಿರುತ್ತೀರಿ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

**ಓ ಹೇ ಕೇ ಸರಿ ಇದೆ.**

-ಸಹಿ- 07-10-2024.

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
**ಮತ್ತು ಜೆ.ಎಂ.ಎಫ್.ಸಿ. ಹಾವೇರಿ.**